



ಚೆನ್ನಾಗಿ ನೆನಪಿದೆ. 'ಮಕ್ಕಳ್ಳ ಮುದ್ದು ಮಾಡಿ ಮಾಡಿ ಹಾಳ್ ಮಾಡ್ತಿ' ಎಂದು ಗದರುತ್ತಿದ್ದರು. ಆ ಅಜ್ಜಿ ಇದಾವುದನ್ನೂ ಗಣಿಸುತ್ತಲೇ ಇರಲಿಲ್ಲ ಎಂಬುದು ಬೇರೆ ಮಾತು. ಆದರೆ ಅಂದು ಅಮ್ಮ ನಮಗೆ ಜೋರು ಎಂದು ಕಂಡರೂ ಇಂದು ಆಕೆಯ ಕಾಳಜಿಯ ಪರಿ ಅರಿವಿಗೆ ಬರುತ್ತಿರುವುದು ಹೌದಲ್ಲ.

ಇನ್ನೊಬ್ಬಾಕೆ ವಿದ್ಯಾರ್ಥಿನಿ ಪ್ರತಿಷ್ಠಿತ ಕಾಲೇಜು ಸೇರಲು ಅಗತ್ಯವಿರುಷ್ಟು ಮಾರ್ಕ್‌ಗಳನ್ನು ಗಳಿಸದೇ ಹೋದರೂ ತಂದೆಯ ಮೇಲೆ ಒತ್ತಡ ಹೇರಿ ಆತ್ಮಹತ್ಯೆಯ ಬೆದರಿಕೆ ಒಡ್ಡಿ ಮಾಮೂಲಿ ಫೀಸಿನ ಹತ್ತರಷ್ಟು ಕಟ್ಟಿ ಅದೇ ಕಾಲೇಜಿಗೆ ಸೇರಿಕೊಂಡಳು.

ಇನ್ನೊಮ್ಮೆ ನನ್ನ ಸ್ನೇಹಿತೆ ಆಕೆಯ ಮಗಳಿಗೆ ಜೋರಾಗಿ ಗದರುತ್ತಿದ್ದಳು. ಮಗಳು ಏನೋ ಒಂದು ತಪ್ಪು ಮಾಡಿದ್ದಳು. 'ಯಾಕೇ ಅಷ್ಟು ಜೋರು ಮಾಡ್ತಿಯಾ? ಪ್ರೀತಿಯಲ್ಲಿ ಹೇಳಿದರೆ ಕೇಳುತ್ತಾಳಲ್ಲವೇ?' ಎಂದಾಗ ಆಕೆ ಈಗ ನನ್ನ ಬೈಗಳು ಕೇಳಿ ಅಭ್ಯಾಸವಾದರೆ ಮುಂದೆ ಸಣ್ಣ ಮಾತು ಯಾರಾದರಂದರೆ ಮನಸ್ಸು ಮುದುಡಿಕೊಂಡು ಇರಬೇಕಾದ ಪರಿಸ್ಥಿತಿ ಇರುವುದಿಲ್ಲ. ಆಕೆ ಕಠಿಣ ಮನಸ್ಸಿನವಳಾಗುತ್ತಾಳೆ ಎಂದಿದ್ದಳು. ಅತಿಯಾಗಿ ಪ್ರೀತಿ ಮಾಡಿ ಏನು ಮಾಡಿದರೂ ಏನು ಆಡಿದರೂ ಬಯ್ಯದೇ ಬೆಳೆಯುವ ಇಂದಿನ ಮಕ್ಕಳು ಸಣ್ಣ ಕಿರಿಕಿರಿಗೂ ಸೋಲೊಪ್ಪಿಕೊಳ್ಳುತ್ತಿರುವುದು ಇದೇ ಕಾರಣಕ್ಕೋ?.

ಇದೆಲ್ಲವೂ ಮುದ್ದುಮುಚ್ಚಟೆಯ ಹಲವು ಮುಖಗಳು ಹಾಗೂ ಅದರ ಪರಿಣಾಮಗಳು. ಪ್ಯಾಂಪರಿಂಗ್ ಎಂಬುದು ಇಂದು ಸರ್ವೇ ಸಾಮಾನ್ಯ. ಅಜ್ಜಿಯಂದಿರು ಅತಿ ಮುದ್ದು ಮಾಡಿ ಮಕ್ಕಳನ್ನು ಕೆಡಿಸುತ್ತಾರೆ ಎಂಬುದು ಹಳೆಯ ಮಾತು. ಆದರೆ ಇಂದು ಅಜ್ಜಿಯಂದಿರಲ್ಲ, ಅಪ್ಪ ಅಮ್ಮನೇ ಮಕ್ಕಳನ್ನು ಮುದ್ದು ಮಾಡುತ್ತಾರೆ. ಕೇಳಿದ್ದನ್ನು ಕೊಡುತ್ತಾರೆ. ಬಯಸಿದ್ದನ್ನು ಕೊಡಿಸುತ್ತಾರೆ. ಎಷ್ಟೋ ಸಂದರ್ಭದಲ್ಲಿ ಮಕ್ಕಳನ್ನು ಹಠಮಾರಿಯನ್ನಾಗಿಸುತ್ತಾರೆ. ಮಕ್ಕಳನ್ನು ಮನೆಯ ಯಾವ ಕೆಲಸದಲ್ಲೂ ತೊಡಗಿಸಿಕೊಳ್ಳದೆ ತಮ್ಮ ಪರಿಸರದ ತಮ್ಮ ಸುತ್ತಮುತ್ತಲಿನ ಯಾವ ಅರಿವೂ ಇಲ್ಲದ ಮಾರ್ಕ್ ತೆಗೆಯುವ ಯಂತ್ರವನ್ನಷ್ಟೇ ತಯಾರು ಮಾಡುತ್ತಿದ್ದಾರೆ.

ಇದು ಪ್ರೀತಿಯೋ ಮೋಹವೋ ಗೊತ್ತಿಲ್ಲ. ಆದರೆ ಇದು ಮಕ್ಕಳಿಗೆ ಅವಲಂಬನೆಯಂತೂ ಹೌದು. ಸ್ವತಂತ್ರ ಚಿಂತನೆಗಳೇ ಇಲ್ಲದ ಈ ಮಕ್ಕಳು ಅಪ್ಪ ಅಮ್ಮ ಇಲ್ಲದಿರುವ ಬಾಳನ್ನು ಕಲ್ಪಿಸಿಕೊಳ್ಳಲಾರರು. ಅವರಿಂದ ಅದು ಸಾಧ್ಯವೂ ಇಲ್ಲ. ಆದರೆ ಇಂದಿನ ಕಾರ್ಪೊರೇಟ್ ಯುಗದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಬೇಕಿದ್ದರೂ ಸಹ ಯುವಕರು ಸ್ವತಂತ್ರ ಚಿಂತನೆಯುಳ್ಳವರೇ ಆಗಬೇಕು. ತಮ್ಮ ನಿರ್ಧಾರ ತಿಳಿಸುವ ಸಂದರ್ಭದಲ್ಲಿ 'ಪೋಷಕರಲ್ಲಿ ಕೇಳಿ ಹೇಳುತ್ತೇನೆ' ಎಂದವರಿಗೆ ಅಲ್ಲಿ ಮಣೆಯಿಲ್ಲ.

## ಮಕ್ಕಳನ್ನು ಪ್ರೀತಿಸುವುದು ಬೇಡವೇ?

ಹಾಗಿದ್ದರೆ ಮಕ್ಕಳಿಗೆ ಕೇಳಿದ್ದನ್ನು ಕೊಡಿಸಬಾರದೇ, ಮಕ್ಕಳನ್ನು ಪ್ರೀತಿಸಲೇ ಬಾರದೇ? ಸಹಕರಿಸಲೇ ಬಾರದೇ?

ಮುದ್ದು, ಪ್ರೀತಿ ಎಂಬ ಹೆಸರಿನಲ್ಲಿ ಕೇಳಿದ್ದನ್ನೆಲ್ಲ ಕೊಡಿಸುತ್ತಾ ಹೋದರೆ ಕೇಳಿದ್ದೆಲ್ಲ ದೊರಕುವುದು ಎಂಬುದು ಖಾತ್ರಿಯಾದ ಮಕ್ಕಳಿಗೆ ಇಲ್ಲ ಎಂಬ ಶಬ್ದದ ಅರ್ಥವೇ ಗೊತ್ತಿರುವುದಿಲ್ಲ. ಇಲ್ಲ ಎಂಬುದನ್ನು ಒಪ್ಪಿಕೊಳ್ಳುವ ಅಥವಾ ಸಹಿಸುವ ಗುಣ ಇಲ್ಲದ ಮಕ್ಕಳಿಗೆ ಬದುಕಿನಲ್ಲಿ ಬಯಸಿದ ವಸ್ತು ಸಿಗದೇ ಹೋದಾಗ ಅವರು ಒಪ್ಪಿಕೊಳ್ಳಲು ಸಿದ್ಧರಾಗುವುದೇ ಇಲ್ಲ. ಅದನ್ನು ಪಡೆಯಲು ಏನೇನೋ ಪ್ರಯತ್ನ ಮಾಡುತ್ತಾರೆ ಅಥವಾ ಬದುಕಲ್ಲಿ ಕುಗ್ಗಿ ಹೋಗಿ ಅನಾಹುತಗಳನ್ನೂ ಮಾಡಿಕೊಳ್ಳುತ್ತಾರೆ ಎಂಬುದು ಮನಃಶಾಸ್ತ್ರಜ್ಞರ ಖಚಿತ ಅಭಿಪ್ರಾಯ. ನಡೆಯುವ ಸಂದರ್ಭದಲ್ಲಿ ಎಡವುತ್ತಾರೆಂದು ಸದಾ ಕಾಲ ಎತ್ತಿಕೊಂಡು ಸುತ್ತುವುದು ಸಾಧ್ಯವೇ. ಮಕ್ಕಳು ನಡೆಯಲು ಕಲಿಯಲೇ ಬೇಕು, ಕಲಿಯುವಾಗ ಬಿದ್ದರೆ ಮಾತ್ರ ಮುಂದೆ ಬೀಳದಂತೆ ಎಚ್ಚರ ವಹಿಸಿಯಾರು. ಒಂದಂತೂ ನಿಜ, ಬೆಳವಣಿಗೆಯ ಎಲ್ಲ ಹಂತದಲ್ಲಿ ಅಪ್ಪ ಅಮ್ಮ ಅಥವಾ ಹಿರಿಯರ ಪ್ರೀತಿ, ಪ್ರೋತ್ಸಾಹ, ಸಹಕಾರ ಬೇಕೇ ಬೇಕು. ಆದರೆ ಎಲ್ಲಿಯವರೆಗೆ ಎಷ್ಟರವರೆಗೆ ಎಂಬುದು ಮಾತ್ರ ಮುಖ್ಯ.

ಎಲ್ಲ ಅಮ್ಮಂದಿರಿಗೂ ಅಪ್ಪಂದಿರಿಗೂ ಅವರ ಮಕ್ಕಳು ರಾಜ ಅಥವಾ ರಾಣಿಯೇ. ಹಾಗೆಂದು ಅವರು ಸೋಲುವುದನ್ನು ಒಪ್ಪಿಕೊಳ್ಳುವುದನ್ನು ಹೇಳಿಕೊಡದೇ ಇದ್ದರೆ ಹೇಗೆ? ಸೋಲನ್ನು ಒಪ್ಪಿಕೊಂಡವನು ಮಾತ್ರ ಆತ್ಮವಿಮರ್ಶೆ ಮಾಡಿಕೊಳ್ಳಬಲ್ಲ, ಸೋಲಿನ ಕಾರಣ ಹುಡುಕಬಲ್ಲ, ಅಥವಾ ಗೆಲುವಿಗೆ ಪ್ರಯತ್ನಿಸಬಲ್ಲ. ಮಕ್ಕಳು ಸೋತರೆ ಮಕ್ಕಳಿಂದ ಹೆಚ್ಚು ಅಳುವವರು ಅಮ್ಮಂದಿರೇ ಆದರೆ ಮಕ್ಕಳಿಗೆ ಸ್ಥೈರ್ಯ ತುಂಬುವವರಾರು. ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾಗುವ ರಿಯಾಲಿಟಿ ಶೋಗಳು ಇದಕ್ಕೆ ನೈಜ ಉದಾಹರಣೆ.

ಒಮ್ಮೆ ಮಕ್ಕಳ ಮನಃಶಾಸ್ತ್ರಜ್ಞರೊಬ್ಬರು ಹೇಳಿದ ಮಾತು– 'ಮಕ್ಕಳು ಮಕ್ಕಳ ಹಾಗಿದ್ದರೆ ಮಾತ್ರ ಚೆನ್ನ. ಆದರೆ ಮಕ್ಕಳು ಏನು ಮಾಡಿದರೂ ಚಂದ ಅಲ್ಲ, ಚಂದ ಆಗಲೂ ಬಾರದು. ತಮ್ಮ ಮಾತಿನ ತಮ್ಮ ನಡತೆಯ ಇತಿ ಮಿತಿಯ ಅರಿವು ಇರಲೇ ಬೇಕು. ಅದರ ಅರಿವಾಗಬೇಕಿದ್ದರೆ ಮಕ್ಕಳು ತಪ್ಪೆಸಗಿದಾಗ ಗದರಲೇ ಬೇಕು, ತಿದ್ದಲೇ ಬೇಕು. ಶಿಷ್ಟಾಚಾರ ನಡತೆಯನ್ನು ಹೇಳಿಕೊಡಲೇ ಬೇಕು'. ಇದು ಒಪ್ಪಿಕೊಳ್ಳಬೇಕಾದ ಮಾತು ಹೌದು ತಾನೆ?

ಒಟ್ಟಾರೆ, ಹೆತ್ತವರು ಮಕ್ಕಳ ಅಗತ್ಯಗಳನ್ನು ಪೂರೈಸುವ ಕಡೆ ಹೆಚ್ಚಿನ ಗಮನ ನೀಡಬೇಕೇ ಹೊರತು ಅವರ ಆಸೆಗಳನ್ನಲ್ಲ, ಮಗುವಿನ ಫ್ಯಾನ್ಸಿಗಳನ್ನಲ್ಲ. ಕಂಡದ್ದನ್ನೆಲ್ಲ ಪಡೆದ ಮಕ್ಕಳು ತಮಗೆ ಬೇಕಾದ್ದು ಪಡೆಯುವುದು ನಮ್ಮ ಹಕ್ಕು. ಕೊಡಿಸುವುದು ಅಪ್ಪಂದಿರ ಕರ್ತವ್ಯ ಎಂದೇ ಭಾವಿಸುತ್ತಾರೆ. ಇಂತಹ ಮಕ್ಕಳೇ ಮುಂದೆ ಬೆಳೆದು ದೊಡ್ಡವರಾದ ಮೇಲೂ ತಮ್ಮ ಹಕ್ಕಿಗಾಗಿ ಚಿಂತಿಸುತ್ತಾರೆಯೇ ಹೊರತು ತಮ್ಮ ಕರ್ತವ್ಯವನ್ನಲ್ಲ. ತಮ್ಮನ್ನು ಇಷ್ಟು ಪ್ರೀತಿಯಿಂದ ಕಂಡ ತಂದೆ ತಾಯಿಯನ್ನು ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುವರೇ ಗೊತ್ತಿಲ್ಲ.

ಮಕ್ಕಳು ಸ್ವತಂತ್ರರಾಗಲು ಸಹಕರಿಸುವುದು, ಅವರಲ್ಲಿ ಸ್ವತಂತ್ರ ಯೋಚನೆಗಳು ಸ್ವತಂತ್ರ ಕನಸುಗಳು ಹುಟ್ಟುವಂತೆ ಪ್ರೇರೇಪಿಸುವುದು ಎಲ್ಲ ಪೋಷಕರ ಕರ್ತವ್ಯವಾಗಬೇಕು. ಮಕ್ಕಳ ಲಾಲನೆ ಪಾಲನೆಯಲ್ಲಿ ಆ ಕಡೆಗೆ ಗಮನವಿರಲೇ ಬೇಕು. ಜೊತೆಗೆ ಬೆಳೆಯುತ್ತಿರುವ ಮಕ್ಕಳಿಗೂ ಪರಿಜ್ಞಾನ ಇರಬೇಕಾದುದು ಅಗತ್ಯ.

ಇದು ಉಪದೇಶವೂ ಅಲ್ಲ. ಯಾರ ದೂರೂ ಅಲ್ಲ. ಟೀಕೆ ಟಿಪ್ಪಣಿಯಂತೂ ಅಲ್ಲವೇ ಅಲ್ಲ. ಈ ನಿಟ್ಟಿನಲ್ಲಿ ಚಿಂತಿಸಿ ಸಾಧ್ಯವಾದಷ್ಟು ಪ್ರಯತ್ನಿಸಿ ಅನೇಕ ಬಾರಿ ಕೈಚೆಲ್ಲಿದ ಒಬ್ಬ ಅಮ್ಮನ ಬಡಬಡಿಕೆ ಅಷ್ಟೆ. ಆದರೂ ಈ ಪ್ರಜ್ಞೆಯಾದರೂ ಎಲ್ಲಾ ಅಮ್ಮ ಅಪ್ಪಂದಿರಿಗಿದ್ದರೆ ಚೆನ್ನಲ್ಲವೇ?